**ಸಾಕ್ಷಿಯನ್ನು ದಿನಾಂಕ 03-02-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಕೆ ವಕೀಲರಿಂದಃ**

1. ನನ್ನ ತಂದೆಗೆ 4 ಗಂಡು ಮತ್ತು ಇಬ್ಬರು ಹೆಣ್ಣು ಒಟ್ಟು 6 ಜನ ಮಕ್ಕಳು. ವಾದಿ ಮತ್ತು ಗಂಗಾಬಾಯಿ ಎಂಬುವವರು ನನ್ನ ಸಹೋದರಿಯರು. ವಾದಿಯ ಪರ ಮತ್ತೊಬ್ಬ ಸಾಕ್ಷಿದಾರ ಪಿ.ಡಬ್ಲ್ಯೂ:3 ದೂದಾ ನಾಯಕ ನನ್ನ ಅಣ್ಣ.

2. ವಾದಿಯ ಗಂಡ ಭದ್ರಾವತಿ ಪಟ್ಟಣದಲ್ಲಿ ಸರ್ಕಾರಿ ಕಚೇರಿಗಳು ಮತ್ತು ಇತರೆ ಅಂಗಡಿ ಮುಂಗಟ್ಟುಗಳಿಗೆ ಟೀ ಮಾಡಿಕೊಂಡು ಹೋಗಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಅವರು ವಾದಿಯೊಂದಿಗೆ ಭದ್ರಾವತಿಯಲ್ಲೇ ಮನೆ ಮಾಡಿಕೊಂಡು ವಾಸವಿದ್ದರು ಎಂದರೆ ಸರಿ. ಸಾಕ್ಷಿ ಪುನಃ 10 ವರ್ಷಗಳ ಹಿಂದೆ ಭದ್ರಾವತಿಯಲ್ಲಿ ವಾಸವಿದ್ದರು ಎನ್ನುತ್ತಾರೆ. ತನ್ನ ಗಂಡ ತೀರಿಕೊಂಡ ನಂತರ ವಾದಿ ಭದ್ರಾವತಿ ಬಿಟ್ಟು ಊರಿಗೆ ಬಂದಳು ಎಂದರೆ ಸಾಕ್ಷಿ ತನ್ನ ಗಂಡ ಬದುಕಿದ್ದಾಗಲೇ ಮತ್ತು ಈಗ್ಗೆ 15 ವರ್ಷಗಳ ಹಿಂದೆಯೇ ವಾದಿ ನಮ್ಮ ಊರಿಗೆಬಂದು ನೆಲೆಸಿದ್ದಾರೆ ಎನ್ನುತ್ತಾರೆ.

3. ತಾಲ್ಲೂಕು ಕಛೇರಿಗೆ ಟೀ ಮಾರಾಟ ಮಾಡಲು ಹೋಗುತ್ತಿದ್ದರಿಂದ ವಾದಿಯ ಗಂಡನಿಗೆ ಅಲ್ಲಿನ ಅಧಿಕಾರಿಗಳ ಪರಿಚಯವಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನಾನು ಅಥವಾ ನನ್ನ ಸಹೋದರರು ಬಗರ್ ಹುಕ್ಕುಂ ಸಾಗುವಳಿ ಜಮೀನಿನ ಮಂಜೂರಾತಿಗಾಗಿ ಯಾವುದೇ ಅರ್ಜಿ ಕೊಟ್ಟಿಲ್ಲ. ನಮಗೆ ಪಿತ್ರಾರ್ಜಿತವಾಗಿ ಸುಮಾರು ¾ ಎಕರೆ ಜಮೀನು ಬಂದಿದೆ. ಸಾಕ್ಷಿ ಸ್ವ ಇಚ್ಛೆಯಿಂದ 1 ಎಕರೆ ಜಮೀನನ್ನು ನಾನು ಸ್ವಂತಕ್ಕೆ ಖರೀದಿ ಮಾಡಿದ್ದೇನೆ ಎನ್ನುತ್ತಾರೆ.

4. ದಾವಾ ಸರ್ವೆ ನಂಬರ್ 47 ರಲ್ಲಿ ಒಟ್ಟಾರೆ ಎಷ್ಟು ಜಮೀನು ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಎಷ್ಟು ಜನ ಬಗರ್ ಹುಕ್ಕುಂ ಸಾಗುವಳಿದಾರರು ಇದ್ದಾರೆ ಮತ್ತು ಎಷ್ಟು ಜನರಿಗೆ ಸಾಗುವಳಿ ಚೀಟಿ ಮಂಜೂರಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ 1 ನೇ ಪ್ರತಿವಾದಿ ಎಷ್ಟು ಎಕರೆ ಜಮೀನು ಸಾಗುವಳಿ ಮಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ವಾದಿ ಈ ದಾವೆಯನ್ನು 33 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ದಾಖಲಿಸಿದ್ದಾರೆ. ಸದರಿ ಜಮೀನನ್ನು ಯಾವುತ್ತು ಸಾಗುವಳಿ ಮಾಡದಿದ್ದರೂ ಸಹ ತನ್ನ ಪರಿಚಯಸ್ಥ ಅಧಿಕಾರಿಗಳ ಸಹಾಯದಿಂದ ಸದರಿ ಜಮೀನಿಗೆ ವಾದಿಯ ಗಂಡ ಸಾಗುವಳಿ ಚೀಟಿ ಸೃಷ್ಟಿಮಾಡಿಸಿಕೊಂಡಿದ್ದಾರೆ ಎಂದು ಮತ್ತು ಸದರಿ ಸಾಗುವಳಿ ಚೀಟಿಯನ್ನು ರದ್ದು ಮಾಡಬೇಕೆಂದು 1 ನೇ ಪ್ರತಿವಾದಿ ಉಪ–ವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿರುವ ಜಮೀನಿನ ಸಂಬಂಧ ಏನು ತಕರಾರು ಇದೆ ಎನ್ನುವುದು ನನಗೆ ಗೊತ್ತಿಲ್ಲ.

5. ಈ ದಾವೆಯನ್ನು ಯಾವ ಉದ್ದೇಶಕ್ಕೆ ದಾಖಲಿಸಲಾಗಿದೆ ಎಂದು ನಿಮಗೆ ಗೊತ್ತೆ ಎಂಬ ಪ್ರಶ್ನೆಗೆ ಸಾಕ್ಷಿ 1 ನೇ ಪ್ರತಿವಾದಿ ವಾದಿಯ ಜಮೀನನ್ನು ಒತ್ತುವರಿ ಮಾಡಿರುವುದರಿಂದ ಆಕೆ ಈ ದಾವೆ ದಾಖಲಿಸಿದ್ದಾರೆ ಎನ್ನುತ್ತಾರೆ.

6. ಉಪ–ವಿಭಾಗಾಧಿಕಾರಿಗಳ ಮುಂದೆ ಸಲ್ಲಿಕೆಯಾಗಿದ್ದ ಮೇಲ್ಮನವಿಯಲ್ಲಿ ವಿಚಾರಣೆ ನಡೆದು 1 ನೇ ಪ್ರತಿವಾದಿ ಮತ್ತು ವಾದಿ ಸ್ವಾಧೀನದಲ್ಲಿರುವ ಜಮೀನುಗಳ ಅಳತೆ ಮಾಡಿ

ನಕಾಶೆಯನ್ನು ತಯಾರಿಸಲಾಗಿದೆ ಎಂದರೆ ಸರಿ. 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿರುವ ಜಮೀನಿನ ಸುತ್ತಲೂ ಕಲ್ಲು ಕಂಬಗಳನ್ನು ಹಾಕಿಕೊಂಡಿದ್ದಾರೆ ಎಂದರೆ ಸಾಕ್ಷಿ ವಾದಿಯನ್ನು ಹೆದರಿಸಿ ಮತ್ತು ಆಕೆಗೆ ಗೊತ್ತಾಗದಂತೆ ಕಲ್ಲು ಕಂಬ ಹಾಕಿದ್ದಾರೆ ಎನ್ನುತ್ತಾರೆ. 1 ನೇ ಪ್ರತಿವಾದಿ ಹಾಕಿಕೊಂಡಿದ್ದ ಕಲ್ಲು ಕಂಬವನ್ನು ದಾಟಿ ವಾದಿ ಅವರ ಜಮೀನನ್ನು ಸಾಗುವಳಿ ಮಾಡಲು ಪ್ರಯತ್ನ ಪಟ್ಟಿದ್ದರು ಎಂದರೆ ಸರಿಯಲ್ಲ. ಆಗ ಇಬ್ಬರ ನಡುವೆ ತಕರಾರುವುಂಟಾಗಿ ಊರಿನಲ್ಲಿ ರಾಜಿ ಪಂಚಾಯತಿ ಆಯಿತು ಎಂದರೆ ಸಾಕ್ಷಿ ಆಗ ನಾನು ಊರಿನಲ್ಲಿ ಇರಲಿಲ್ಲ ಎನ್ನುತ್ತಾರೆ.

7. ವಾದಿಗೆ ಸೇರಿದ್ದು ಎನ್ನಲಾದ ದಾವಾ ಸ್ವತ್ತಿನ ಅಕ್ಕ-ಪಕ್ಕದಲ್ಲಿ ಯಾರ ಜಮೀನುಗಳು ಇದೆ ಎನ್ನುವುದು ನನಗೆ ಗೊತ್ತಿಲ್ಲ. ವಾದಿ ನನ್ನ ತಂಗಿಯಾಗಿರುವುದರಿಂದ ಆಕಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನ ಚಕ್ಕುಬಂಧಿ ಬರೆಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ವಾದಿಯ ಗಂಡ ಎಲ್ಲವನ್ನು ಹೇಳಿ ಬರೆಸಿದ್ದಾರೆ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯ ಸಂಬಂಧ ಏನು ಗೊತ್ತಿಲ್ಲದಿದ್ದರೂ ವಾದಿಯ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**